ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು**

**ವಿಷಯ :** 2017-18ನೇ ಸಾಲಿಗೆ ಸರ್.ಸಿ.ವಿ. ರಾಮನ್ ಮತ್ತು ಸಂಚಿಹೊನ್ನಮ್ಮ ವಿದ್ಯಾರ್ಥಿವೇತನಕ್ಕಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ:ಇಡಿ/65/ಹೆಚ್‌ಪಿಸಿ/2012, ದಿ:17.09.2012.
2. ಈ ಕಛೇರಿ ಸುತ್ತೋಲೆ ಸಂಖ್ಯೆ: ಕಾಶಿಇ/81/ಹಿಂವಕಇ/ವಿವೇ/2014-15, ದಿನಾಂಕ: 27.02.2015.
3. ಈ ಕಛೇರಿ ಸುತ್ತೋಲೆ ಸಂಖ್ಯೆ: ಕಾಶಿಇ/86/ಅನುದಾನ ಬಿಡುಗಡೆ/2014-15/ವಿವೇ, ದಿನಾಂಕ:20.03.2015, 14.09.2015 ಮತ್ತು 16.12.2015.
4. ಸರ್ಕಾರದ ಆದೇಶ ಸಂಖ್ಯೆ: ಇಡಿ 41/ಹೆಚ್‌ಪಿಸಿ/2017, ಬೆಂಗಳೂರು, ದಿನಾಂಕ : 13.04.2017, 06.07.2017, 28.09.2017 ಮತ್ತು 08.01.2018.
5. ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಂಗಳೂರು, ಮಂಗಳೂರು ಹಾಗೂ ಧಾರವಾಡ ಇವರು ಅನುದಾನ ಕೋರಿಕೆ ಸಲ್ಲಿಸಿರುವ ಪ್ರಸ್ತಾವನೆಗಳು.

*****

**ಪ್ರಸ್ತಾವನೆ :**

2017-18ನೇ ಸಾಲಿನಲ್ಲಿ ಉಲ್ಲೇಖ (2) ಮತ್ತು (3) ಸುತ್ತೋಲೆಗಳನ್ವಯ ಸರ್.ಸಿ.ವಿ. ರಾಮನ್ ಮತ್ತು ಸಂಚಿಹೊನ್ನಮ್ಮ ವಿದ್ಯಾರ್ಥಿವೇತನ ಮಂಜೂರಾತಿ ಸಂಬಂಧ ಆರು ಪ್ರಾದೇಶಿಕ ಜಂಟಿ ನಿರ್ದೇಶಕರು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಈಗಾಗಲೇ ಸೂಚನೆ ನೀಡಿದೆ. 2017-18ನೇ ಸಾಲಿಗೆ ವಿದ್ಯಾರ್ಥಿವೇತನಕ್ಕಾಗಿ ಲೆಕ್ಕ ಶೀರ್ಷಿಕೆ:2202-03-107-1-10-117 ರಡಿಯಲ್ಲಿ ರೂ.600.00 ಲಕ್ಷಗಳನ್ನು ಉಲ್ಲೇಖ (4)ರ ಸರ್ಕಾರದ ಆದೇಶದಲ್ಲಿ ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಅನುದಾನದಲ್ಲಿ ಈಗಾಗಲೇ 06 ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಸರ್.ಸಿ.ವಿ. ರಾಮನ್ ಮತ್ತು ಸಂಚಿಹೊನ್ನಮ್ಮ ವಿದ್ಯಾರ್ಥಿವೇತನಕ್ಕಾಗಿ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಉಲ್ಲೇಖ (5)ರಲ್ಲಿನ ಪ್ರಾದೇಶಿಕ ಜಂಟಿ ನಿರ್ದೇಶಕರ ಕೋರಿಕೆಯನ್ವಯ ಸರ್.ಸಿ.ವಿ. ರಾಮನ್ ಮತ್ತು ಸಂಚಿಹೊನ್ನಮ್ಮ ವಿದ್ಯಾರ್ಥಿವೇತನಕ್ಕಾಗಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನದ ಮೊತ್ತದಲ್ಲಿ ಬಾಕಿ ಉಳಿದಿರುವ ಅನುದಾನದ ಲಭ್ಯತೆಯ ಮೇರೆಗೆ 2017-18ನೇ ಸಾಲಿಗೆ ಸರ್.ಸಿ.ವಿ. ರಾಮನ್ ಮತ್ತು ಸಂಚಿಹೊನ್ನಮ್ಮ ನವೀಕರಣ ಮತ್ತು ನೂತನ ವಿದ್ಯಾರ್ಥಿವೇತನವನ್ನು ವಿದ್ಯಾರ್ಥಿಗಳಿಗೆ ಮಂಜೂರು ಮಾಡುವ ಸಲುವಾಗಿ ಅನುದಾನ ಬಿಡುಗಡೆ ಮಾಡಲು ಈ ಆದೇಶ.

**ಆದೇಶ ಸಂಖ್ಯೆ: ಕಾಶಿಇ/60/ಪ್ರಾ.ಜಂನಿ/ಅನುದಾನ ಬಿಡುಗಡೆ/2017-18/ವಿವೇ, ದಿನಾಂಕ : 21.02.2018.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ 2017-18ನೇ ಸಾಲಿಗೆ ಸರ್.ಸಿ.ವಿ.ರಾಮನ್ ಮತ್ತು ಸಂಚಿ ಹೊನ್ನಮ್ಮ ನವೀಕರಣ ಮತ್ತು ನೂತನ ವಿದ್ಯಾರ್ಥಿವೇತನಗಳನ್ನು ಮಂಜೂರು ಮಾಡಲು ಸರ್ಕಾರದಿಂದ ಬಿಡುಗಡೆ ಮಾಡಿರುವ ಒಟ್ಟು ರೂ.600.00 ಲಕ್ಷಗಳ ಅನುದಾನದಲ್ಲಿ ಬಾಕಿ ಉಳಿದಿರುವ ಮೊತ್ತವನ್ನು 03 ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ. ಪ್ರಾದೇಶಿಕ ಜಂಟಿ ನಿರ್ದೇಶಕರವಾರು ಬಿಡುಗಡೆ ಮಾಡಿರುವ ಅನುದಾನವನ್ನು ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧ (1) ರಿಂದ (3) ರಲ್ಲಿ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | ಬಿಡುಗಡೆ ಮಾಡುತ್ತಿರುವ ಅನುದಾನದ ಮೊತ್ತ | ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|
| "ಸರ್.ಸಿ.ವಿ. ರಾಮನ್ ವಿದ್ಯಾರ್ಥಿವೇತನ" | | | | |
| 1 | 2202-03-107-1-10-117 (P) (GEN) | 28.00 | 560 | ಪ್ರತಿ ವಿದ್ಯಾರ್ಥಿಗೆ ತಲಾ ರೂ.5000/- ಗಳಂತೆ |
| "ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ" | | | | |
| 2 | 2202-03-107-1-10-117 (P) (GEN) | 30.76 | 1538 | ಪ್ರತಿ ವಿದ್ಯಾರ್ಥಿನಿಗೆ ತಲಾ ರೂ.2000/- ಗಳಂತೆ |
| ಒಟ್ಟು ಮೊತ್ತ | | 58.76 | 2098 | |

(ರೂ.ಐವತ್ತೆಂಟು ಲಕ್ಷದ ಎಪ್ಪತ್ತಾರು ಸಾವಿರಗಳು ಮಾತ್ರ)

...2

**2017-18ನೇ ಸಾಲಿಗೆ ನವೀಕರಣ ವಿದ್ಯಾರ್ಥಿವೇತನ ಮಂಜೂರು ಮಾಡುವಾಗ ಅನುಸರಿಸಬೇಕಾದ ನಿಬಂಧನೆಗಳು** :

1. ಆಯಾ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗೆ ಒಳಪಡುವ ಎಲ್ಲಾ ಜಿಲ್ಲೆಗಳ ಸರ್ಕಾರಿ/ಖಾಸಗಿ ಅನುದಾನಿತ ಕಾಲೇಜುಗಳಿಂದ **2017-18ನೇ ಸಾಲಿಗೆ ಸ್ವೀಕೃತವಾದ ನೂತನ/ನವೀಕರಣ** ಅರ್ಜಿಗಳನ್ನು ಪರಿಶೀಲಿಸಿ ಜಿಲ್ಲಾವಾರು, ಗರಿಷ್ಠ ಅಂಕದಿಂದ ಕನಿಷ್ಠ ಅಂಕದಂತೆ ಮೆರಿಟ್ ಆಧಾರದ ಮೇಲೆ (in descending order) ಪಟ್ಟಿಯನ್ನು ಸಿದ್ಧಪಡಿಸಿ ವಿದ್ಯಾರ್ಥಿವೇತನ ಮಂಜೂರಾತಿಗೆ ಕ್ರಮವಹಿಸುವುದು.
2. ಜಿಲ್ಲಾವಾರು ಮೆರಿಟ್ ಆಧಾರದ ಪಟ್ಟಿಯನ್ನು ತಯಾರಿಸಿದ ನಂತರ ಬಿಡುಗಡೆ ಮಾಡಿರುವ ಅನುದಾನವನ್ನು ಎಲ್ಲಾ ಜಿಲ್ಲೆಗಳ ಕಾಲೇಜುಗಳ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ (ಅನುಪಾತದಂತೆ) ವಿದ್ಯಾರ್ಥಿವೇತನ ಮಂಜೂರು ಮಾಡುವುದು.
3. ಆಯ್ಕೆಗೊಂಡ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಕಾಲೇಜುವಾರು ಪಟ್ಟಿ ತಯಾರಿಸಿ ವಿದ್ಯಾರ್ಥಿವೇತನ ಬಿಡುಗಡೆಗೆ ಕ್ರಮ ಕೈಗೊಳ್ಳುವುದು.
4. ಆಯಾ ವಿದ್ಯಾರ್ಥಿವೇತನಕ್ಕೆ ತಮಗೆ ಬಿಡುಗಡೆ ಮಾಡಿರುವ ಅನುದಾನಗಳನ್ನು ಖಜಾನೆ-2ರ ಮುಖಾಂತರ ಫಲಾನುಭವಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡುವುದು. ವಿದ್ಯಾರ್ಥಿವೇತನ ಮೊತ್ತಗಳು ಜಮಾ ಆಗಿರುವ ಬಗ್ಗೆ ಖಚಿತಪಡಿಸಿಕೊಂಡು 62ಬಿ ಪಡೆದು ಒಟ್ಟು ಮೊತ್ತಕ್ಕೆ ಬಳಕೆ ಪ್ರಮಾಣ ಪತ್ರಗಳನ್ನು ಈ ಕಛೇರಿಗೆ ಸಲ್ಲಿಸುವುದು.
5. ವಿದ್ಯಾರ್ಥಿವೇತನ ಮಂಜೂರು ಮಾಡುವ ಸಮಯದಲ್ಲಿ ಪಾರದರ್ಶಕತೆ ಕಾಪಾಡುವುದು ಹಾಗೂ ಯಾವುದೇ ದೂರಿಗೆ (ವಿದ್ಯಾರ್ಥಿ/ಪೋಷಕರಿಂದ) ಆಸ್ಪದವಿಲ್ಲದಂತೆ ವಿದ್ಯಾರ್ಥಿವೇತನ ಮಂಜೂರು ಮಾಡುವುದು.
6. ಯಾವುದೇ ಕಾರಣಕ್ಕೂ ಅನುದಾನ ವ್ಯಪಗತ (Lapse) ಆಗದಂತೆ ಮುಂಜಾಗ್ರತೆ ವಹಿಸುವುದು.

ಸರ್.ಸಿ.ವಿ. ರಾಮನ್ ಮತ್ತು ಸಂಚಿಹೊನ್ನಮ್ಮ **ನವೀಕರಣ & ನೂತನ ವಿದ್ಯಾರ್ಥಿವೇತನಗಳಿಗೆ** ಬಿಡುಗಡೆ ಮಾಡಿರುವ ಅನುದಾನದ ವಿವರಗಳನ್ನು ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ. ಬಿಡುಗಡೆ ಮಾಡಿರುವ ಅನುದಾನಗಳನ್ನು ಬಳಸಿಕೊಂಡು, ವಿದ್ಯಾರ್ಥಿವೇತನವಾರು ಬಳಕೆ ಪ್ರಮಾಣ ಪತ್ರವನ್ನು ಈ ಕಛೇರಿಗೆ ಈ ಆದೇಶದೊಂದಿಗೆ ಲಗತ್ತಿಸಲಾದ ನಮೂನೆಯಲ್ಲಿ ರವಾನಿಸಲು ಸೂಚಿಸಿದೆ. ಮೇಲ್ಕಂಡ ಲೆಕ್ಕಶೀರ್ಷಿಕೆಯಡಿಯಲ್ಲಿ ಬಿಡುಗಡೆಯಾಗಿರುವ ಅನುದಾನವನ್ನು ಯಾವುದೇ ಕಾರಣಕ್ಕೂ ಅಧ್ಯರ್ಪಿಸದೆ (should not surrender) ಹಾಗೂ ಮೇಲ್ಕಂಡ ಯಾವುದೇ ಅನುದಾನ ವ್ಯಪಗತ (Lapse) ವಾಗದಂತೆ ಅಗತ್ಯ ಕ್ರಮ ವಹಿಸಲು ಮತ್ತೊಮ್ಮೆ ಸೂಚಿಸಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು (ಪ್ರ)

**ಇವರಿಗೆ :**

1. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಬೆಂಗಳೂರು, ಮಂಗಳೂರು ಹಾಗೂ ಧಾರವಾಡ.
2. ಖಜಾನೆ-2ರ ನೋಡಲ್ ಅಧಿಕಾರಿ, ಕೇಂದ್ರ ಕಛೇರಿ, ಬೆಂಗಳೂರು – ಇವರಿಗೆ ಸದರಿ ಅನುದಾನಗಳನ್ನು ಮೇಲ್ಕಂಡ ಪ್ರಾದೇಶಿಕ ಜಂಟಿ ನಿರ್ದೇಶಕರಿಗೆ ಅನುಬಂಧದಲ್ಲಿರುವಂತೆ ಖಜಾನೆ-2ರ ಮುಖಾಂತರ C Mode ನಲ್ಲಿ ಬಿಡುಗಡೆ ಮಾಡಲು ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಿದೆ.

**ಪ್ರತಿಯನ್ನು ಶೀಘ್ರ ಕ್ರಮಕ್ಕಾಗಿ ಕಳುಹಿಸಿದೆ.**

1. ಲೆಕ್ಕಾಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು ಹಾಗೂ ಪ್ರಾದೇಶಿಕ ಕಛೇರಿ, ಕಲ್ಬುರ್ಗಿ – ಮಾಹಿತಿಗಾಗಿ.
2. ಉಪನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು- ಇವರಿಗೆ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ
3. ಮ್ಯಾನೇಜರ್/ಅಧೀಕ್ಷಕರು, ಯೋಜನಾ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು.
4. ಮಾಹಿತಿ ಅಧಿಕಾರಿಗಳು, ಮಾಹಿತಿ & ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಸದರಿ ಆದೇಶವನ್ನು ಇಲಾಖಾ ವೆಬ್-ಸೈಟ್‌ನಲ್ಲಿ ಅಳವಡಿಸಲು ತಿಳಿಸಲಾಗಿದೆ. 5. ಕಛೇರಿ ಪ್ರತಿ.

ಆದೇಶ ಸಂಖ್ಯೆ: ಕಾಶಿಇ/60/ಪ್ರಾ.ಜಂನಿ/ಅನುದಾನ ಬಿಡುಗಡೆ/2017-18/ವಿವೇ, ದಿನಾಂಕ :21.02.2018ಕ್ಕೆ ಸಂಬಂಧಿಸಿದಂತೆ

## ಅನುಬಂಧ – 1

### ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಂಗಳೂರು

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | ಬಿಡುಗಡೆ ಮಾಡುತ್ತಿರುವ ಅನುದಾನ ಮೊತ್ತ | ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|
| ಸರ್.ಸಿ.ವಿ. ರಾಮನ್ ವಿದ್ಯಾರ್ಥಿವೇತನ 2017-18 | | | | |
| 1 | 2202-03-107-1-10-117 (P) (GEN) | 10.00 | 200 | ತಲಾ ರೂ.5,000/- |
| | | | | |
| ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ 2017-18 | | | | |
| 2 | 2202-03-107-1-10-117 (P) (GEN) | 10.00 | 500 | ತಲಾ ರೂ.2,000/- |
| ಒಟ್ಟು ಮೊತ್ತ | | 20.00 | 700 | |

(ರೂ.ಇಪ್ಪತ್ತು ಲಕ್ಷಗಳು ಮಾತ್ರ)

ಕಾಲೇಜು ಶಿಕ್ಷಣ ನಿರ್ದೇಶಕರು (ಪ್ರ)

D:\2017-18 Files\file 60- JD Budjet\IInd inst 21.02.2018.docx

ಆದೇಶ ಸಂಖ್ಯೆ: ಕಾಶಿಇ/60/ಪ್ರಾ.ಜಂನಿ/ಅನುದಾನ ಬಿಡುಗಡೆ/2017-18/ವಿವೇ, ದಿನಾಂಕ :21.02.2018ಕ್ಕೆ ಸಂಬಂಧಿಸಿದಂತೆ

## ಅನುಬಂಧ – 2

### ಪ್ರಾದೇಶಿಕ ಜಂಟಿ ನಿರ್ದೇಶಕರು, ಮಂಗಳೂರು

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | ಬಿಡುಗಡೆ ಮಾಡುತ್ತಿರುವ ಅನುದಾನ ಮೊತ್ತ | ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|
| ಸರ್.ಸಿ.ವಿ. ರಾಮನ್ ವಿದ್ಯಾರ್ಥಿವೇತನ 2017-18 | | | | |
| 1 | 2202-03-107-1-10-117 (P) (GEN) | 10.00 | 200 | ತಲಾ ರೂ.5,000/- |
| | | | | |
| ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ 2017-18 | | | | |
| 2 | 2202-03-107-1-10-117 (P) (GEN) | 10.76 | 538 | ತಲಾ ರೂ.2,000/ |
| ಒಟ್ಟು ಮೊತ್ತ | | 20.76 | 738 | |

(ರೂ.ಇಪ್ಪತ್ತು ಲಕ್ಷದ ಎಪ್ಪತ್ತಾರು ಸಾವಿರಗಳು ಮಾತ್ರ)

ಕಾಲೇಜು ಶಿಕ್ಷಣ ನಿರ್ದೇಶಕರು (ಪ್ರ)

ಆದೇಶ ಸಂಖ್ಯೆ: ಕಾಶಿಇ/60/ಪ್ರಾ.ಜಂನಿ/ಅನುದಾನ ಬಿಡುಗಡೆ/2017-18/ವಿವೇ, ದಿನಾಂಕ :21.02.2018ಕ್ಕೆ ಸಂಬಂಧಿಸಿದಂತೆ

## ಅನುಬಂಧ – 3

### ಪ್ರಾದೇಶಿಕ ಜಂಟಿ ನಿರ್ದೇಶಕರು, ಧಾರವಾಡ

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | ಬಿಡುಗಡೆ ಮಾಡುತ್ತಿರುವ ಅನುದಾನ ಮೊತ್ತ | ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|
| ಸರ್.ಸಿ.ವಿ. ರಾಮನ್ ವಿದ್ಯಾರ್ಥಿವೇತನ 2017-18 | | | | |
| 1 | 2202-03-107-1-10-117 (P) (GEN) | 8.00 | 160 | ತಲಾ ರೂ.5,000/- |
| | | | | |
| ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ 2017-18 | | | | |
| 2 | 2202-03-107-1-10-117 (P) (GEN) | 10.00 | 500 | ತಲಾ ರೂ.2,000/- |
| ಒಟ್ಟು ಮೊತ್ತ | | 18.00 | 660 | |

(ರೂ.ಹದಿನೆಂಟು ಲಕ್ಷಗಳು ಮಾತ್ರ)

ಕಾಲೇಜು ಶಿಕ್ಷಣ ನಿರ್ದೇಶಕರು (ಪ್ರ)

D:\2017-18 Files\file 60- JD Budjet\IInd inst 21.02.2018.docx